ಒ ಎಸ್ 4/2021 ಪಿ.ಡಬ್ಲ್ಯೂ: 1

ಇಂದು ದಿ: 04.06.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ MB ವಕೀಲರಿಂದ:

ನಾನು, ನನ್ನ ತಾಯಿ ಮತ್ತು ಅಕ್ಕ ಈಗ ಹುಲ್ಲಹಳ್ಳಿಯಲ್ಲಿ 4 ವರ್ಷಗಳಿಂದ ವಾಸವಿದ್ದೇವೆ. ನನ್ನ ತಾಯಿ ಸರ್ಕಾರಿ ಶಾಲೆಯ ಶಿಕ್ಷಕಿ ಎಂದರೆ ಸರಿ. ನನ್ನ ಅಕ್ಕ ಇಂಜಿನಿಯರಿಂಗ್ ಓದುತ್ತಿದ್ದಾರೆ. ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ. ನನ್ನ ತಂದೆ ಸಿದ್ದರಾಜು ಕಪ್ಪಸೋಗೆಯಲ್ಲಿ ವಾಸವಿದ್ದಾರೆ. ನನ್ನ ತಾತ ಮಾದಶೆಟ್ಟಿ. ನನ್ನ ತಾತನ ತಂದೆ ಹೆಸರು ಜವರಶೆಟ್ಟಿ. ಜವರಶೆಟ್ಟಿಗೆ ಸಿದ್ದಶೆಟ್ಟಿ ಮತ್ತು ಮಾದಶೆಟ್ಟಿ ಎಂಬ ಮಕ್ಕಳು ಎಂದರೆ ಸರಿ. ಮಾದಶೆಟ್ಟಿ ಮತ್ತು ಸಿದ್ದಶೆಟ್ಟಿ ವಂಶದಲ್ಲಿ ದೇವಶೆಟ್ಟಿ ಎನ್ನುವವರು ಯಾರೂ ಇಲ್ಲ.

ನಾನು ಸರ್ವೆ ನಂಬರ್ 91, 97 ಮತ್ತು ಖಾಲಿ ಜಾಗ ಮತ್ತುಮನೆ ಕುರಿತು ದಾವೆ ಸಲ್ಲಿಸಿದ್ದೇನೆ. ಸನಂ 97 ರ ಪಹಣಿ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ನನಗೆ ಓದಲು ಬರೆಯಲು ಬರುತ್ತದೆ. ಸನಂ 91 ರ ಬಗ್ಗೆ ಮಾತ್ರ ದಾವೆ ದಾಖಲಿಸಿದ್ದೇನೆ ಆದರೆ ಸರ್ವೆ ನಂಬರ್ 91/6 ಬಗ್ಗೆ ದಾವಾ ದಾಖಲಿಸಿಲ್ಲ ಎಂದರೆ ಸರ್ವೆ ನಂಬರ್ 91 ಕ್ಕೆ ಮಾತ್ರ ದಾವೆ ದಾಖಲಿಸಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಸರ್ವೆ ನಂಬರ್ 97 ರ ಆರ್ ಟಿ ಸಿ ಯಲ್ಲಿ ದೇವಶೆಟ್ಟಿಎಂಬ ಹೆಸರು ಇದ್ದು ಅವರಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.